# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ    E-mail : kannadapostnews@gmail.com    / ಕನ್ನಡ post    Price: ₹1

Vol.No.02 | Issue. 216 | Pages. 2 | Date: 06-08-2026, THURSDAY    RNI NO: KARKAN/2024/89601    Kannada Daily

ಸಂಪುಟ : 02 - ಸಂಚಿಕೆ : 216 - ಪುಟಗಳು : 2    06-08-2026    ಗುರುವಾರ    Ph: 8762954248    ದರ : ₹1


# ರೈತರ ನೋವು ಆಲಿಸಿದ ಸಚಿವ ಶಿವಲಿಂಗೇಗೌಡ

## ಸಚಿವರಾಗಿ ಜಿಲ್ಲೆಗೆ ಮೊದಲ ಭೇಟಿ | ಅಧಿವೇಶನದಲ್ಲಿ ಚರ್ಚಿಸುವ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ನೂತನ ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಜಿಲ್ಲೆಗೆ ಭೇಟಿ ನೀಡಿದ ಕೆ.ಎಂ.ಶಿವಲಿಂಗೇಗೌಡ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿದರು ಮಾತ್ರವಲ್ಲದೆ ಸಚಿವರು ಸಹ ವಿವಿಧೆಡೆ ಪ್ರವಾಸ ನಡೆಸಿದರು. ಅಬ್ಬರದ ಭಾಷಣದ ಮೂಲಕ ಮೊದಲ ದಿನವೇ ಗಮನ ಸೆಳೆದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಿರ್ದೇಶನದಂತೆ ಶ್ರವಣಬೆಳಗೊಳ, ಹೊಳೆನರಸೀಪುರ ಹಾಗೂ ಸಕಲೇಶಪುರ ವಿಧಾನಸಭಾ ಕ್ಷೇತ್ರದ ಹಳ್ಳಿಗಳಿಗೆ ಭೇಟಿ ನೀಡಿ ಬರ ಪರಿಶೀಲಿಸಿದರು. ಮುಸುಕಿನ ಜೋಳಕ್ಕೆ ಬಿಳಿಸುಳಿ ರೋಗ ಹಾಗು ಮಳೆ ಕೊರತೆಯಿಂದ ರೈತರು ಅನುಭವಿಸುತ್ತಿರುವ






ತೊಂದರೆಯನ್ನು ಸಚಿವರು ಕಣ್ಣಾರೆ ಕಂಡರು. ಸಂಸದ ಶ್ರೇಯಸ್ ಪಟೇಲ್ ಅವರ ಸಹಕಾರದಿಂದಲೇ ನಾನು ಸಚಿವನಾಗಿದ್ದೇನೆಂದು ಸಚಿವರು ಪದೆ ಪದೇ ಹೇಳುತ್ತಿದ್ದುದು ಗಮನ ಸೆಳೆಯಿತು.

ಜಿಲ್ಲೆಯ ಹೆಬ್ಬಾಗಿಲು ಕಿರೀಸಾವೆ ಗಡಿಯಲ್ಲಿ ಕಾರ್ಯಕರ್ತರಿಂದ ಸನ್ಮಾನ ಸ್ವೀಕರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಎಂ.ಶಿವಲಿಂಗೇಗೌಡ ಅವರು, ರಾಜ್ಯದಲ್ಲಿ ಆಘಾತಕಾರಿ ಬರಗಾಲ ಆವರಿಸಿದೆ. ರೈತರು ಸಂಕಷ್ಟದಲ್ಲಿರುವಾಗ ಬರ ಅಧ್ಯಯನಕ್ಕೆ ಬಂದ ನನಗೆ ಹಾರ, ತುರಾಯಿ ಹಾಕಿಸಿಕೊಳ್ಳುವುದು ಇಷ್ಟವಿಲ್ಲ. ಆದರೂ ಕಾರ್ಯಕರ್ತರು ಪ್ರೀತಿಯಿಂದ ಹಾಕಿದ್ದಾರೆ. ನಮ್ಮ ಮೊದಲ ಆದ್ಯತೆ ರೈತರ ಸಮಸ್ಯೆಗಳನ್ನು ಬಗೆಹರಿಸುವುದು ಎಂದರು.

### ಬರ ಸಮೀಕ್ಷೆ ಮತ್ತು ರೈತರ ಸಮಸ್ಯೆ

ರಾಜ್ಯದಲ್ಲಿ ಬರದ ಛಾಯೆ ಮೂಡಿದ್ದು, ಮೊದಲ ಸಂಪುಟ ಸಭೆಯಲ್ಲೇ ಮುಖ್ಯಮಂತ್ರಿ ಬರಗಾಲದ ಅಧ್ಯಯನ ನಡೆಸಿ ವರದಿ ನೀಡುವಂತೆ ಸೂಚಿಸಿದ್ದಾರೆ. ಸಮೀಕ್ಷೆ ನಡೆಸಿ, ಎನ್ ಡಿಆರ್ಎಫ್ ಮಾರ್ಗಸೂಚಿಯಂತೆ ಕೇಂದ್ರ ಸರ್ಕಾರದಿಂದ ಅನುದಾನ ಪಡೆಯಲು ಕ್ರಮ ಕೈಗೊಳ್ಳಲಾಗುವುದು. ಬೆಳೆ ವಿಮೆ ಪರಿಹಾರ ಸಿಗದೆ ರೈತರು ಕಂಗಾಲಾಗಿದ್ದಾರೆ. ಆ. 13ರಿಂದ ಆರಂಭವಾಗುವ ಅಧಿವೇಶನದಲ್ಲಿ ರೈತರ ಸಮಸ್ಯೆಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ರೈತರನ್ನು ಉಳಿಸುವ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು.

### ಕಾಂಗ್ರೆಸ್ ನಾಯಕರಿಗೆ ಕೃತಜ್ಞತೆ

ಜಿಲ್ಲೆಗೆ ಹೊಸ ನಾಯಕತ್ವವನ್ನು ನೀಡಿದ ಕಾಂಗ್ರೆಸ್ ಹೈಕಮಾಂಡ್‌ಗೆ ಅರಸೀಕೆರೆ ಹಾಗೂ ಜಿಲ್ಲೆಯ ಜನರ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ನನ್ನನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆತರುವಾಗ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ರಣದೀಪ್ ಸುರ್ಜೇವಾಲಾ ಅವರು ಕೊಟ್ಟ ಮಾತನ್ನು ಉಳಿಸಿಕೊಂಡಿದ್ದಾರೆ. ನನ್ನ ತಂದೆ-ತಾಯಿಯ ಪುಣ್ಯದಿಂದ ನನಗೆ ಸಚಿವ ಸ್ಥಾನ ಒಲಿದಿದೆ. ನಾನು ಯಾವುದೇ ನಿರ್ದಿಷ್ಟ ಖಾತೆಗೆ ಬೇಡಿಕೆ ಇಟ್ಟಿಲ್ಲ. ಯಾವ ಜವಾಬ್ದಾರಿ ನೀಡಿದರೂ ನಿಭಾಯಿಸುತ್ತೇನೆ. ಅದು ಅವರ ಪರಮಾಧಿಕಾರ ಎಂದು ಸ್ಪಷ್ಟಪಡಿಸಿದರು.

### ಸಚಿವ ಸ್ಥಾನ ಕೈತಪ್ಪಿದವರ ಅಸಮಾಧಾನ ಸಹಜ

ಕಾಂಗ್ರೆಸ್ ಶಾಸಕರ ಅಸಮಾಧಾನದ ಕುರಿತು ಪ್ರತಿಕ್ರಿಯಿಸಿದ ಅವರು, ಸಂಪುಟ ವಿಸ್ತರಣೆ ವೇಳೆ ಆಕಾಂಕ್ಷಿಗಳಲ್ಲಿ ಅಸಮಾಧಾನ ಉಂಟಾಗುವುದು ಸಹಜ. ಹಿಂದೆ ಜೆ.ಹೆಚ್. ಪಟೇಲ್ ಅವರ ಕಾಲದಲ್ಲಿ 64 ಜನರನ್ನು ಸಚಿವರನ್ನಾಗಿ ಮಾಡಲಾಗಿತ್ತು. ಉಳಿದವರಿಗೆ ನಿಗಮ ಮಂಡಳಿ ಹಾಗೂ ಗೂಟದ ಕಾರು ನೀಡಲಾಗಿತ್ತು. ಆದರೆ, ಈಗ ಕೇವಲ 34 ಮಂದಿಗೆ ಮಾತ್ರ ಸಚಿವ ಸ್ಥಾನ ನೀಡಲು ಕಾನೂನಿನಲ್ಲಿ ಅವಕಾಶವಿದೆ. ಹಿರಿಯರನ್ನು ಕಡೆಗಣಿಸಿದ ವಿಚಾರ ಹೈಕಮಾಂಡ್‌ಗೆ ಬಿಟ್ಟದ್ದು. ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಬಲಿಷ್ಠವಾಗಿದ್ದು, ಇಂತಹ ಸಣ್ಣಪುಟ್ಟ ಗೊಂದಲಗಳನ್ನು ಸಮರ್ಥಿಸಿಕೊಂಡು ನಿಭಾಯಿಸುವ ಶಕ್ತಿ ಪಕ್ಷಕ್ಕಿದೆ ಎಂದರು.

ಜಿಲ್ಲೆಯಲ್ಲಿ ಕಾಡಾನೆ ಸಮಸ್ಯೆ ಹಲವು ವರ್ಷಗಳಿಂದ ಜೀವಂತವಾಗಿದೆ. ಮುಂದಿನ ದಿನಗಳಲ್ಲಿ ಯಾವುದೇ ರೈತರು ಕಾಡಾನೆ ದಾಳಿಗೆ ತುತ್ತಾಗಬಾರದು. ಅದಕ್ಕಾಗಿ ಸೂಕ್ತ ಕ್ರಿಯಾಯೋಜನೆ ರೂಪಿಸಿ ಹೋರಾಟ ಮಾಡುತ್ತೇವೆ.

### ಬರದ ಸಮಸ್ಯೆ ಬಿಚ್ಚಿಟ್ಟ ಶಾಸಕ ಬಾಲಕೃಷ್ಣ

ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಪೂರ್ವ ಮುಂಗಾರಿನಿಂದಲೂ ತಾಲೂಕಿನಾದ್ಯಂತ ವಾಡಿಕೆಯಂತೆ ಮಳೆಯಾಗದ ಕಾರಣ ಬರ ಪರಿಸ್ಥಿತಿ ತೀವ್ರವಾಗಿ ಕಾಡುತ್ತಿದ್ದು ರೈತರ ಬದುಕು ಬೀದಿಗೆ ಬಂದು ನಿಂತಿದೆ. ಯಾವುದೇ ಬೆಳೆಗಳನ್ನು ಬಿತ್ತಲು ಸಾಧ್ಯವಾಗದೆ ರೈತರ ಮನೆಯ ಕಣಜ ಖಾಲಿಯಾಗಿದೆ. ರಾಗಿ ಬಿತ್ತನೆಗೆ ದಿನಗಳು ಸಮೀಪಿಸಿದರು ಇನ್ನೂ ಕೃಷಿ ಜಮೀನುಗಳನ್ನು ಉಳುಮೆ ಮಾಡಿ ಹದಗೊಳಿಸಲು ಸಾಧ್ಯವಾಗಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ವಾಡಿಕೆಯಂತೆ ಮಳೆಯಾಗದ ಕಾರಣ ಕೆರೆಕಟ್ಟೆಗಳಲ್ಲಿ ನೀರಿಲ್ಲ. ಅಂತರ್ಜಲ ಕುಸಿತದಿಂದಾಗಿ ಕೊಳವೆ ಬಾವಿಗಳಲ್ಲಿಯೂ ಸಹ ಗಣನೀಯವಾಗಿ ನೀರಿನ ಮಟ್ಟ ಕುಸಿಯುತ್ತಿದೆ. ಇದರಿಂದ ಕೃಷಿ ಚಟುವಟಿಕೆಗೆ ಮತ್ತಷ್ಟು ಹಿನ್ನಡೆಯಾಗುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರವು ಚಿಂತನೆ ನಡೆಸಿ ಬರ ಪರಿಹಾರ ಕಲ್ಪಿಸುವಲ್ಲಿ ಶೀಘ್ರವೇ ಮುಂದಾಗಬೇಕು ಎಂದು ಸಚಿವರಲ್ಲಿ ಮನವಿ ಮಾಡಿದರು.

ಪಕ್ಷಭೇದ ಮರೆತು ಹಾಸನ ಜಿಲ್ಲೆಯನ್ನು ಪ್ರಗತಿಯ ಪಥದತ್ತ ಕೊಂಡೊಯ್ಯೋಣ ಎಂದು ಅವರು ಕರೆ ನೀಡಿದರು.

ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಸಿಎಂ ಸಿದ್ದರಾಮಯ್ಯ ಗೈರಾದ ವಿಚಾರದ ಬಗ್ಗೆ ಮಾತನಾಡಿದ ಅವರು, ನಾನು ಹೋಗಿ ಈ ಬಗ್ಗೆ ಕೇಳಿದೆ. ಕಾಲ್ಪನಿಕವಾಗಿ ನಡೆದಂತಹ ಇನ್ಸಿಡೆಂಟ್‌ನಿಂದ ಮತ್ತು ಹುಟ್ಟುಹಬ್ಬವಿದ್ದ ಕಾರಣ ಬರಲು ಆಗಲಿಲ್ಲ. ಆದರೆ ಟಿವಿಯಲ್ಲಿ ಎಲ್ಲವನ್ನೂ ಕುಳಿತು ವೀಕ್ಷಿಸಿದೆ ಎಂದು ಅವರು ತಿಳಿಸಿದ್ದಾರೆ ಎಂದರು.

ಇದೇ ವೇಳೆ ಬಿಜೆಪಿ ನಾಯಕರ ಬರ ಅಧ್ಯಯನ ಪ್ರವಾಸದ ಬಗ್ಗೆ ಮಾತನಾಡಿದ ಸಚಿವರು, ಅವರದ್ದು ರಾಷ್ಟ್ರೀಯ ಪಕ್ಷ, ಅವರ ಕರ್ತವ್ಯ ಅವರು ಮಾಡಿದ್ದಾರೆ. ನಾವು ಈಗ ಅಧಿಕಾರದಲ್ಲಿದ್ದೇವೆ. ಮೊದಲು ರೈತ, ಅವರ ಮೇಲಿನ ಶ್ರದ್ಧೆ ಮತ್ತು ಭಕ್ತಿ ನಮ್ಮ ಕರ್ತವ್ಯ. ರೈತರ ಪರವಾದ ನಿಲುವು ನಮ್ಮದಾಗಿರುವುದರಿಂದ ನಾವು ಕೂಡ ಅಧ್ಯಯನಕ್ಕೆ ಹೊರಟಿದ್ದೇವೆ ಎಂದು ತಿಳಿಸಿದರು.

ಸಂಸದ ಶ್ರೇಯಸ್ ಪಟೇಲ್, ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ, ಕರ್ನಾಟಕ ವಿದ್ಯುತ್ ಕಾರ್ಖಾನೆ ಅಧ್ಯಕ್ಷ ಲಲಿತ್ ರಾಘವ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಯುವರಾಜ್, ತಹಶೀಲ್ದಾರ್ ಶಂಕರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಸತೀಶ್, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಮೋಹನ್ ಕುಮಾರ್, ಹಿರೀಸಾವೆ ಪಿಎಸ್ಐ ರೂಪಾದೇವಿ ಬೀರಾದರ್, ಕಾಂಗ್ರೆಸ್ ಮುಖಂಡರಾದ ಎಚ್.ಎಸ್.ವಿಜಯಕುಮಾರ್, ಸಿ.ಎನ್.ಮಂಜುನಾಥ್, ಉದಯ ಕುಮಾರ್, ರಾಶಿಕ್ ಗೌಡ, ಬ್ಯಾಂಗಲ್ಸ್ ಮಹೇಶ್, ಮಾದಲಗೆರೆ ನಂಜೇಗೌಡ ಹಾಗೂ ಇತರರು ಇದ್ದರು.

## ರೈತರ ಮನೆ ಬಾಗಿಲಿಗೆ ಚೆಕ್ ತಲುಪಬೇಕು

ಚನ್ನರಾಯಪಟ್ಟಣ: ಜಿಲ್ಲೆ ಬರಗಾಲ ಪೀಡಿತವಾಗಿದೆ. ರೈತರು ಒಂದೇಡೆ ಬೆಳೆ ಬಿತ್ತಲಾಗಿಲ್ಲ, ಇನ್ನೊಂದೆಡೆ ಬಿತ್ತಿದ ಬೆಳೆ ಮಳೆಯಿಲ್ಲದೆ ಒಣಗಿದೆ. ಜೋಳ ರೋಗದಿಂದ ಭಾದಿತವಾಗಿದೆ. ಅಧಿಕಾರಿಗಳು ಬೆಳೆವಿಮೆ ಪರಿಹಾರದ ಹಣವನ್ನು ಪ್ರಾಮಾಣಿಕವಾಗಿ ನೀಡುವ ಮೂಲಕ ರೈತರನ್ನು ಉಳಿಸಿಕೊಳ್ಳಬೇಕಾಗಿದೆ ಎಂದು ಸಚಿವ ಕೆ.ಎಂ.ಶಿವಲಿಂಗೇಗೌಡ ಹೇಳಿದರು.

ತಾಲೂಕಿನ ದಂಡಿಗನಹಳ್ಳಿ ಹೋಬಳಿಯ ಬರಗೂರು ಗ್ರಾಮದಲ್ಲಿ ಮುಸುಕಿನ ಜೋಳದಲ್ಲಿ ಬಿಳಿಸುಳಿ ರೋಗದ ದಾಟುಗಳ ವೀಕ್ಷಣೆ ಮಾಡಿ ಅವರು ಮಾತನಾಡಿದರು.

ರೈತರು ಸತತವಾಗಿ ಒಂದೇ ತೆರೆನಾದ ಬೆಳೆಯನ್ನು ಸತತವಾಗಿಬೆಳೆಯುವುದರಿಂದ ಜೋಳದಲ್ಲಿ ಬಿಳಿಸುಳಿ ರೋಗ ಕಂಡುಬರುತ್ತಿದೆ. ಮಣ್ಣಿನಲ್ಲಿರುವ ರೋಗಾಣುಗಳ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಬೆಳೆ ಪರಿವರ್ತನೆ ಅಗತ್ಯ ಈ ಮೂಲಕ ರೋಗಮುಕ್ತ ಬೆಳೆಗೆ ಸಹಕಾರಿ ಎಂದರು.

ಮುಂಗಾರು ಸಂಪೂರ್ಣ ಕೈಕೊಟ್ಟಿದು, ಹಿಂಗಾರು ಮಳೆ ಬೀಳುವಲಕ್ಷಣಗಳಿಲ್ಲ, ಈ ನಿಟ್ಟಿನಲ್ಲಿ ರೈತರನ್ನು ಉಳಿಸಿಕೊಳ್ಳುವ ಸಂಪೂರ್ಣ ಹೊಣೆ ಸರ್ಕಾರದ್ದಾಗಿದೆ. ಬೆಳೆ ಮಳೆಯಿಲ್ಲದೆ ಹಾಳಾಗಿರುವ ಹಿನ್ನಲೆಯಲ್ಲಿ ವಿಮೆ ಕಟ್ಟಿರುವ ರೈತರಿಗೆ ಮೊದಲ ಹಂತದಲ್ಲಿ ಪರಿಹಾರ ಹಣವನ್ನು ವಿಮೆ ಕಂಪನಿ ಪಾವತಿಸಬೇಕು, ಎನ್ಡಿಆರ್ಎಫ್ ನಿಯಮದಂತೆ ಬೆಳೆ ಹಾನಿ ಸಮೀಕ್ಷೆ ನಡೆಸಿ ಎರಡನೇ ಹಂತದ ಪರಿಹಾರವನ್ನು ಸರ್ಕಾರ ರೈತರಿಗೆ ನೀಡಲಿದೆ. ಇದೀಗ ಮೊದಲ ಹಂತದ ಹಣವನ್ನು ಶೀಘ್ರ ನೀಡುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ವಿಮೆ ಕಂಪನಿ ಮುಖ್ಯಸ್ಥರು ತಮ್ಮನ್ನು ಭೇಟಿ ಮಾಡುವಂತೆ ಜಿಲ್ಲಾಧಿಕಾರಿಗೆ ಸೂಚನೆ ನೀಡಿದ ಸಚಿವರು, ವಿಮೆ ಏಜೆಂಟ್‌ಗಳೊಂದಿಗೆ ನಾನು ಮಾತನಾಡುವುದಿಲ್ಲ, ವಿಮೆ ಹಣವನ್ನು ಕಂಪನಿ ರೈತರ ಹೊಲಗಳಿಗೆ ಹೋಗಿ ನೀಡಬೇಕು ಎಂದ ಅವರು ಕೃಷಿ ಅಧಿಕಾರಿಗಳು ರೈತರಹೊಲಗಳಿಗೆ ನಿರಂತರ ಭೇಟಿ ನೀಡಿ ಸತತ ಒಂದೇ ತೆರೆನಾದ ಬೆಳೆಯನ್ನು ಬೆಳೆಯದಂತೆ ರೈತರಿಗೆ ಮನವರಿಕೆ ಮಾಡಿಕೊಡಬೇಕು ಎಂದು ತಿಳಿಸಿದರು.

ರಾಜ್ಯದಲ್ಲಿ ಬರದ ಛಾಯೆ ಮೂಡಿದ್ದು, ಮೊದಲ ಸಂಪುಟ ಸಭೆಯಲ್ಲೇ ಮುಖ್ಯಮಂತ್ರಿಗಳು ಬರಗಾಲದ ಅಧ್ಯಯನ ನಡೆಸಿ ವರದಿ ನೀಡುವಂತೆ ಸೂಚಿಸಿದ್ದಾರೆ. ಸಮೀಕ್ಷೆ ನಡೆಸಿ, ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಕೇಂದ್ರ ಸರ್ಕಾರದಿಂದ ಅನುದಾನ ಪಡೆಯಲು ಕ್ರಮ ಕೈಗೊಳ್ಳಲಾಗುವುದು. ಬೆಳೆ ವಿಮೆ ಪರಿಹಾರ ಸಿಗದೆ ರೈತರು ಕಂಗಾಲಾಗಿದ್ದಾರೆ. ಆಗಸ್ಟ್ 13ರಿಂದ ಆರಂಭವಾಗುವ ಅಧಿವೇಶನದಲ್ಲಿ ರೈತರ ಸಮಸ್ಯೆಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ರೈತರನ್ನು ಉಳಿಸುವ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು.



# ರಘು ಆತ್ಮಹತ್ಯೆ ಮಾಡಿಕೊಂಡ ಸ್ಥಳದಲ್ಲೇ ಹೆಂಡತಿ ಶವ?

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಪತ್ನಿಯನ್ನು ಕೊಲೆ ಮಾಡಿ ಬಳಿಕ ಪತಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರಕರಣಕ್ಕೆ ಐದು ದಿನಗಳ ಬಳಿಕ ಮಹತ್ವದ ತಿರುವು ದೊರೆತಿದೆ.

ಬೇಲೂರು ತಾಲ್ಲೂಕಿನ ಕೆಸಗೋಡು ಗ್ರಾಮದ ನಿವಾಸಿ ರಘು ನೇಣುಹಾಕಿಕೊಂಡ ಸ್ಥಳದಿಂದ ಅಂದಾಜು ನೂರು ಮೀಟರ್ ದೂರದಲ್ಲಿ ಬುಧವಾರ ಮೃತದೇಹದ ಕುರುಹು ಪತ್ತೆಯಾಗಿದ್ದು ಇದು ನಾಪತ್ತೆಯಾಗಿದ್ದ ಗಗನಾಳದ್ದಾಗಿರಬಹುದೆಂಬ ಶಂಕೆ ವ್ಯಕ್ತವಾಗಿದೆ.

ಕೆಸಗೋಡು ಗ್ರಾಮದ ರಘು, ಪತ್ನಿ ಗಗನಾಳನ್ನು ಕೊಲೆ ಮಾಡಿದ ಬಳಿಕ ಮೃತದೇಹವನ್ನು ಸಮೀಪದ ಗದ್ದೆಯಲ್ಲಿ ಹೂತು ಬಳಿಕ ತಾನೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನಲಾಗಿದೆ.

ರಘು ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದ ಬಳಿಕ ಗಗನಾಳ ಮೃತದೇಹಕ್ಕಾಗಿ ಪೊಲೀಸರು ಐದು ದಿನಗಳಿಂದ ವ್ಯಾಪಕ ಶೋಧ ಕಾರ್ಯ ನಡೆಸುತ್ತಿದ್ದರು. ಶ್ವಾನದಳದ



ನೆರವು ಪಡೆಯುವುದರ ಜತೆಗೆ ಡ್ರೋನ್ ಕ್ಯಾಮೆರಾದ ಮೊರೆ ಹೋಗಲಾಗಿತ್ತು. ಅಲ್ಲದೆ, ಸುತ್ತಮುತ್ತಲಿನ ಸಿಸಿ ಕ್ಯಾಮೆರಾ ದೃಶ್ಯಾವಳಿಗಳನ್ನೂ ಪರಿಶೀಲಿಸಲಾಗಿತ್ತು. ಆದರೂ ಗಗನಾಳ ಮೃತದೇಹದ ಸುಳಿವು ಸಿಗದೆ ಕೊಲೆ ಪ್ರಕರಣ ಪೊಲೀಸರಿಗೆ ಕಗ್ಗಂಟಾಗಿತ್ತು.

ಆದರೆ, ರಘು ನೇಣು ಬಿಗಿದುಕೊಂಡಿದ್ದ ಸ್ಥಳದಿಂದ ಕೆಲವೇ ಮೀಟರ್ ದೂರದಲ್ಲಿರುವ ಗದ್ದೆಯಲ್ಲಿ ಪ್ರಾಣಿಗಳು ಮಣ್ಣನ್ನು ಕೆರೆದಿದ್ದರಿಂದ ಮೃತದೇಹದ ಭಾಗ ಹೊರಗೆ ಕಾಣಿಸಿಕೊಂಡಿದ್ದು, ರಕ್ತ ಮಿಶ್ರಿತ ಗುಂಡಿಯಲ್ಲಿ ನೀರು ಶೇಖರಣೆಯಾಗಿ ಕೊಳೆತ ವಾಸನೆ ಹೊರಬಂದಿದೆ ಎನ್ನಲಾಗಿದೆ.

ಮೃತ ರಘು ತಂದೆ ಶೇಷಪ್ಪ ಶೆಟ್ಟಿ ಈ ಬಗ್ಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಧಾವಿಸಿದ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಮೃತದೇಹವು ಗಗನಾಳದ್ದೇ ಎಂದು ಶಂಕಿಸಲಾಗಿದ್ದು, ಅಧಿಕೃತ ಗುರುತು ಪತ್ತೆ ಹಾಗೂ ಮರಣೋತ್ತರ ಪರೀಕ್ಷೆಯ ಬಳಿಕ ಹೆಚ್ಚಿನ ಮಾಹಿತಿ ತಿಳಿಯಲಿದೆ.

ಐದು ದಿನಗಳಿಂದ ಪೊಲೀಸರಿಗೆ ತಲೆನೋವಾಗಿದ್ದ ಈ ಕೊಲೆ ಪ್ರಕರಣದಲ್ಲಿ ಮೃತದೇಹ ಪತ್ತೆಯಾಗಿರುವುದರಿಂದ ಮಹತ್ವದ ಸುಳಿವು ದೊರೆತಂತಾಗಿದ್ದು ಗುರುವಾರ ಉಪ ವಿಭಾಗಾಧಿಕಾರಿ ಹಾಗೂ ಬೇಲೂರು ತಹಸೀಲ್ದಾರ್ ಉಪಸ್ಥಿತಿಯಲ್ಲಿ ಮೃತದೇಹವನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗೆ ಒಳಪಡಿಸಲು ಕ್ರಮ ಕೈಗೊಳ್ಳಲಾಗಿದ್ದು, ಘಟನೆಯ ಕುರಿತು ಪೊಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

# ಸ್ವಾತಂತ್ರ್ಯ ದಿನಾಚರಣೆ: ಅಗತ್ಯ ಸಿದ್ಧತೆಗೆ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಯಾವುದೇ ಲೋಪಗಳಿಲ್ಲದಂತೆ, ಅರ್ಥಪೂರ್ಣ ಹಾಗೂ ಅಚ್ಚುಕಟ್ಟಾಗಿ ನಡೆಸುವ ನಿಟ್ಟಿನಲ್ಲಿ ಅಗತ್ಯ ಸಿದ್ಧತೆಗೆ ಕ್ರಮವಹಿಸಲು ಅಪರ ಜಿಲ್ಲಾಧಿಕಾರಿ ಹೆಚ್. ಕೆ ಕೃಷ್ಣಮೂರ್ತಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.




ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ಸ್ವಾತಂತ್ರ್ಯ ದಿನಾಚರಣೆ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಆ.15 ರಂದು ಬೆಳಿಗ್ಗೆ 8 ಗಂಟೆಯೊಳಗೆ ತಮ್ಮ ಕಚೇರಿಗಳಲ್ಲಿ ಧ್ವಜಾರೋಹಣ ನೆರವೇರಿಸಿ ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ನಡೆಯಲಿರುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಡ್ಡಾಯವಾಗಿ ಭಾಗವಹಿಸಲು ಸೂಚಿಸಿದರು.

ಕಾರ್ಯಕ್ರಮದಲ್ಲಿ ಮಹಾತ್ಮಗಾಂಧೀಜಿ ಅವರ ಭಾವಚಿತ್ರದೊಂದಿಗೆ ಸಂವಿಧಾನ ಪಿತಾಮಹ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವ ಚಿತ್ರವನ್ನು ಇರಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ಎಲ್ಲಾ ಸರ್ಕಾರಿ ಕಟ್ಟಡಗಳಲ್ಲಿ ಆ.14 ಮತ್ತು 15 ರಂದು ವಿದ್ಯುತ್ ದೀಪಾಲಂಕಾರ ವ್ಯವಸ್ಥೆಯನ್ನು ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸಾಂಸ್ಕೃತಿಕ ಕಾರ್ಯಕ್ರಮ ಅತ್ಯುತ್ತಮವಾಗಿ ಮೂಡಿ ಬರಲು ಕ್ರಮವಹಿಸುವಂತೆ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಸೂಚಿಸಿದರು. ನಗರದ ಮೂರು ಮುಖ್ಯ ವೃತ್ತಗಳಿಗೆ ದೀಪಾಲಂಕಾರ ವ್ಯವಸ್ಥೆ ಮಾಡಲು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ನಿರ್ದೇಶನ ನೀಡಿದರು.

ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಾಧಕರಿಗೆ ಸನ್ಮಾನ ಮಾಡಲು ಸಮಿತಿಯಲ್ಲಿ ನಿಗದಿತ ಮಾನದಂಡಗಳಂತೆ ಆಯ್ಕೆ ಮಾಡುವಂತೆ ಹಾಗೂ ಪಥಸಂಚಲನ ಕಾರ್ಯಕ್ರಮ ಆಕ?ಕ ಹಾಗೂ ಅಚ್ಚುಕಟ್ಟಾಗಿ ಮೂಡಿಬರಲು ತಂಡಗಳು ತಾಲೀಮು ನಡೆಸಲು ಸೂಚನೆ ನೀಡಿದರು.

ಸಭೆಯಲ್ಲಿ ಮಹಾನಗರ ಪಾಲಿಕೆಯ ಆಯುಕ್ತರಾದ ಕೃಷ್ಣಮೂರ್ತಿ ಹಾಗೂ ವಿವಿಧ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು.

# ಸೆ.25 ರಂದು ವಾರ್ಷಿಕ ಮಹಾಸಭೆ

ಹಾಸನ : ಸಹಕಾರ ಸಂಘಗಳ ಕಾಯಿದೆ 1959 ರ ಕಲಂ 27(1)(ಎ) ರನ್ವಯ, ಎಲ್ಲಾ ವಿಧವಾದ ಸಹಕಾರ ಸಂಘ / ಬ್ಯಾಂಕ್‌ಗಳು 2025-26 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು 25 ನೇ ಸೆಪ್ಟೆಂಬರ್ 2026 ರೊಳಗೆ ಕಡ್ಡಾಯವಾಗಿ ನಡೆಸಬೇಕಾಗಿದ್ದು, ವಾರ್ಷಿಕ ಮಹಾಸಭೆ ನಡೆಸುವ ಮುನ್ನ ಸಂಘದ ಲೆಕ್ಕಪರಿಶೋಧನೆಯನ್ನು ನಡೆಸಿ ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ ಎಂದು ಉಪವಿಭಾಗ ಸಹಕಾರ ಸಂಘಗಳ ಸಹಾಯಕ ನಿಬಂಧಕರು ತಿಳಿಸಿದ್ದಾರೆ. ಹಾಸನ ಉಪವಿಭಾಗದ ಎಲ್ಲಾ ವಿಧವಾದ ಸಹಕಾರ ಸಂಘ / ಬ್ಯಾಂಕ್‌ಗಳು, ಸಂಘದ ಲೆಕ್ಕಪುಸ್ತಕಗಳನ್ನು ಆಡಿಟ್ ಮಾಡಿಸಿ, 2025-26 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು, ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ, ಹಾಜರಾತಿ, ಸಭಾ ನಡವಳಿ ಹಾಗೂ ಅನುಮೋದನೆಗೊಂಡ ಆಸ್ತಿ-ಜವಾಬ್ದಾರಿ ತ:ಖ್ತೆಗಳನ್ನು ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರ ಧೃಡೀಕರಣದೊಂದಿಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ಈ ಕಚೇರಿಗೆ ಸಲ್ಲಿಸುವಂತೆ ತಿಳಿಸಿದ್ದಾರೆ.

# ಪಕ್ಷ ಕಟ್ಟಲು ಆಸ್ತಿ ಮಾರಿದ ಅಪರೂಪದ ನಾಯಕ ಬಿ.ಬಿ.ಶಿವಪ್ಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ, ಮಾಜಿ ಶಾಸಕ ಬಿ.ಬಿ. ಶಿವಪ್ಪ ಅವರು ತಮ್ಮ ಸ್ವಂತ ಆಸ್ತಿಯನ್ನು ಮಾರಾಟ ಮಾಡಿ ಪಕ್ಷ ಸಂಘಟನೆಗೆ ಸಮರ್ಪಿಸಿದ ಅಪರೂಪದ ನಾಯಕರು ಎಂದು ಶಾಸಕ ಸಿಮೆಂಟ್ ಮಂಜು ಸ್ಮರಿಸಿದರು.

ಬುಧವಾರ ಯಸಳೂರಿನ ನಂದೀಶ್ವರ ಕಲ್ಯಾಣ ಮಂಟಪದಲ್ಲಿ ಭಾರತೀಯ ಜನತಾ ಪಾರ್ಟಿ ಸಕಲೇಶಪುರ ಮಂಡಲದ ವತಿಯಿಂದ ಆಯೋಜಿಸಿದ್ದ ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ, ಮಾಜಿ ಶಾಸಕ ಬಿ.ಬಿ. ಶಿವಪ್ಪ ಅವರ 9ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಿ.ಬಿ. ಶಿವಪ್ಪ ಅವರ ರಾಜಕೀಯ ಜೀವನ, ಸಂಘಟನಾ ಶಕ್ತಿ ಹಾಗೂ ವ್ಯಕ್ತಿತ್ವವನ್ನು ಕೊಂಡಾಡಿದರು.

ಬಿ.ಬಿ. ಶಿವಪ್ಪ ಅವರು ಈ ಕ್ಷೇತ್ರವನ್ನು ಎರಡು ಬಾರಿ ಪ್ರತಿನಿಧಿಸಿ ಶಾಸಕರಾಗಿ ಸೇವೆ ಸಲ್ಲಿಸಿದವರು. ಅಲ್ಲದೆ ಭಾರತೀಯ ಜನತಾ ಪಾರ್ಟಿಯ ರಾಜ್ಯಾಧ್ಯಕ್ಷರಾಗಿ ಪಕ್ಷವನ್ನು ಸಮರ್ಥವಾಗಿ ಮುನ್ನಡೆಸಿದ ನಾಯಕರು. ಇಂದಿನ ದಿನಗಳಲ್ಲಿ ಗ್ರಾಮ ಪಂಚಾಯಿತಿಯಿಂದ ಹಿಡಿದು ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ವಿಧಾನಸಭೆ ಹಾಗೂ ರಾಜ್ಯಾಧ್ಯಕ್ಷ ಸ್ಥಾನಗಳವರೆಗೆ ಎಲ್ಲೆಡೆ ಪೈಪೋಟಿ ಇದೆ. ಆದರೆ ಶಿವಪ್ಪ ಅವರ ಕಾಲದಲ್ಲಿ ಬಿಜೆಪಿ ಸಂಘಟನೆ ಆರಂಭಿಕ ಹಂತದಲ್ಲಿದ್ದಾಗ ಪಕ್ಷದ ಜವಾಬ್ದಾರಿ ಹೊರುವವರೇ ವಿರಳರಾಗಿದ್ದರು. ಅಂತಹ ಸಂಕಷ್ಟದ ಸಂದರ್ಭದಲ್ಲಿ ತಮ್ಮ ಸ್ವಂತ ದುಡಿಮೆಯ ಹಣವನ್ನು ಪಕ್ಷಕ್ಕೆ ಸಮರ್ಪಿಸಿ, ತಮ್ಮ ತೋಟ



ಹಾಗೂ ಕಾಫಿ ಬೆಳೆ ಮಾರಾಟ ಮಾಡಿ ಪಕ್ಷ ಕಟ್ಟಿದ ರಾಜ್ಯದ ಏಕೈಕ ನಾಯಕರಲ್ಲಿ ಬಿ.ಬಿ. ಶಿವಪ್ಪ ಅವರು ಪ್ರಮುಖರು. ಇದನ್ನು ನಾವು ಹೆಮ್ಮೆಯಿಂದ ಹೇಳಬಹುದು ಎಂದು ಹೇಳಿದರು.

ಇಂದಿಗೂ ಪಕ್ಷದ ಸಭೆ, ಸಮಾರಂಭಗಳು ಹಾಗೂ ಕಾರ್ಯಕಾರಿಣಿ ಸಭೆಗಳಲ್ಲಿ ಬಿ.ಬಿ. ಶಿವಪ್ಪ ಅವರ ಹೆಸರು ಗೌರವದಿಂದ ಪ್ರಸ್ತಾಪವಾಗುತ್ತದೆ. ಇತ್ತೀಚೆಗೆ ನಡೆದ ವಿವಿಧ ಸಭೆಗಳಲ್ಲಿಯೂ ಹಿರಿಯ ನಾಯಕರು ಅವರ ಸೇವೆಯನ್ನು ಸ್ಮರಿಸಿದ್ದಾರೆ. ಬಿಜೆಪಿ ತನ್ನ ಇತಿಹಾಸವನ್ನು ಎಂದಿಗೂ ಮರೆಯುವುದಿಲ್ಲ ಎಂಬುದಕ್ಕೆ ಇದುವೇ ಸಾಕ್ಷಿ. ಇತ್ತೀಚಿನ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿಯೂ ಮಾಜಿ ರಾಜ್ಯಾಧ್ಯಕ್ಷರಾಗಿ ಅವರ ಭಾವಚಿತ್ರವನ್ನು ಪ್ರದರ್ಶಿಸಿ ಗೌರವ ಸಲ್ಲಿಸಲಾಗಿತ್ತು. ಅದನ್ನು ನೋಡಿ ನಮಗೆ ಅಪಾರ ಸಂತೋಷವಾಯಿತು ಎಂದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಇತಿಹಾಸವನ್ನು ಅರಿಯದವರು ಇತಿಹಾಸವನ್ನು ಸೃಷ್ಟಿಸಲಾರರು ಎಂಬ ಮಾತನ್ನು ಉಲ್ಲೇಖಿಸಿದ ಶಾಸಕ ಮಂಜು, ಇಂದು ಭಾರತೀಯ ಜನತಾ ಪಾರ್ಟಿ ದೇಶದಲ್ಲಿ ಸುವರ್ಣಯುಗವನ್ನು ಕಾಣುತ್ತಿದೆ. ನರೇಂದ್ರ ಮೋದಿ ಅವರಂತಹ ಪ್ರಧಾನಮಂತ್ರಿಯನ್ನು ಹಾಗೂ ಅಟಲ್ ಬಿಹಾರಿ ವಾಜಪೇಯಿ ಅವರಂತಹ ಶ್ರೇಷ್ಠ ನಾಯಕರನ್ನು ದೇಶಕ್ಕೆ ನೀಡಿರುವ ಪಕ್ಷ ಬಿಜೆಪಿ. ಹಲವು ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿರುವ ಪಕ್ಷದ ಬೆಳವಣಿಗೆಯ ಹಿಂದೆ ಬಿ.ಬಿ. ಶಿವಪ್ಪ ಅವರಂತಹ ತ್ಯಾಗಮಯ ನಾಯಕರ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು.

ಸಕಲೇಶಪುರ ಕ್ಷೇತ್ರದ ಜನರು ಇಂದಿಗೂ ಅವರನ್ನು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ. ಅವರು ಎಂದಿಗೂ ಅಹಂಕಾರದಿಂದ ಮಾತನಾಡಲಿಲ್ಲ. ಸಮಾಜದ ಯಾವುದೇ ವರ್ಗದ ವ್ಯಕ್ತಿಯನ್ನು ಅವಹೇಳನ ಮಾಡುವ ಮಾತು ಆಡಲಿಲ್ಲ. ಸಣ್ಣ ಮಕ್ಕಳಿಂದ ಹಿಡಿದು ಹಿರಿಯರವರೆಗೆ ಎಲ್ಲರನ್ನೂ ಸಮಾನ ಗೌರವದಿಂದ ಕಾಣುತ್ತಿದ್ದ ಅವರ ವ್ಯಕ್ತಿತ್ವವೇ ಅವರನ್ನು ಜನಮನದಲ್ಲಿ ಶಾಶ್ವತವಾಗಿ ಉಳಿಸಿದೆ ಎಂದು ನುಡಿದರು.

ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ನೇತ್ರಾವತಿ ಮಂಜುನಾಥ್ ಮಾತನಾಡಿ, ಬಿ.ಬಿ. ಶಿವಪ್ಪ ಅವರು ಮೊದಲ ಬಾರಿಗೆ ಶಾಸಕ ಸ್ಥಾನಕ್ಕೆ ಸ್ಪರ್ಧಿಸಿದಾಗಿನಿಂದಲೇ ಅವರ ಪರವಾಗಿ ಪ್ರಚಾರ ಮಾಡಿದ್ದೆ. ನನ್ನ ರಾಜಕೀಯ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲೂ ಅವರು ಮತ್ತು ಸುಶೀಲಮ್ಮ ಅವರು ನನಗೆ ಪ್ರೋತ್ಸಾಹ ಹಾಗೂ ಆಶೀರ್ವಾದ ನೀಡಿದ್ದರು. ಪಕ್ಷದಲ್ಲಿದ್ದು ಪಕ್ಷಕ್ಕೇ ದ್ರೋಹ ಮಾಡಬಾರದು ಎಂಬ ಮೌಲ್ಯವನ್ನು ಅವರು ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದಿದ್ದರು. ಇಂದು ಪಕ್ಷ ನೀಡಿರುವ ಜವಾಬ್ದಾರಿಯನ್ನು ಅವರ ಆದರ್ಶಗಳನ್ನು ಮುಂದುವರಿಸಿಕೊಂಡು ಪ್ರಾಮಾಣಿಕವಾಗಿ ನಿರ್ವಹಿಸುತ್ತೇನೆ. ಮಹಿಳಾ ಮೋರ್ಚಾವನ್ನು ಮತ್ತಷ್ಟು ಬಲಪಡಿಸುವ ಮೂಲಕ ಅವರ ಸೇವೆಗೆ ನಿಜವಾದ ಗೌರವ ಸಲ್ಲಿಸುತ್ತೇನೆ ಎಂದು ಅವರು ತಿಳಿಸಿದರು. ಈ ವೇಳೆ ನಿವೃತ್ತ ಶಿಕ್ಷಕರಾದ ಮಹೇಶ್ ಬಿ.ಟಿ., ಮಹೇಶ್ ಹಾಗೂ ರೇಣುಕಾ ಅವರುಗಳಿಗೆ ಸನ್ಮಾನಿಸಲಾಯಿತು. ಬಿಜೆಪಿ ಮಂಡಲ ಅಧ್ಯಕ್ಷ ವಳಲಹಳ್ಳಿ ಅಶ್ವಥ್, ಮುಖಂಡರಾದ, ಜೈ ಮಾರುತಿ ದೇವರಾಜ್, ಜಯ ಪ್ರಕಾಶ್ ದೊಡ್ಡ ದಿಣ್ಣೆ, ಪ್ರತಾಪ್, ಪವಿತ್ರ ಮಂಜುನಾಥ್, ಸವಿನ್ ಗೌಡ, ಬ್ಯಾಕರವಳ್ಳಿ ಜಯಣ್ಣ, ಕಿತ್ತಗಳಲೆ ಉದಯ ಕುಮಾರ್, ಲೋಕೇಶ್ ಗೌಡ, ಮಂಡಲ ಪ್ರಧಾನ ಕಾರ್ಯದರ್ಶಿ ಮೋಹನ್ ಮತ್ತಿತರರಿದ್ದರು.

# ಪರಿಹಾರಕ್ಕಾಗಿ ರೈತರ ಅನಿರ್ದಿಷ್ಟಾವಧಿ ಮುಷ್ಕರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಎತ್ತಿನಹೊಳೆ ಯೋಜನೆಯ ನಾಲೆ ಕಾಮಗಾರಿಗೆ ಜಮೀನು ಕಳೆದುಕೊಂಡ ರೈತರಿಗೆ ಸಮರ್ಪಕ ಪರಿಹಾರ ನೀಡುತ್ತಿಲ್ಲ ಎಂದು ಆರೋಪಿಸಿ ರೈತರು ಕಾಮಗಾರಿ ಉದ್ದೇಶಿತ ಸ್ಥಳದಲ್ಲಿ ಅನಿರ್ದಿಷ್ಟಾವದಿ ಮುಷ್ಕರ ಆರಂಭಿಸಿದ್ದಾರೆ.

ಐದಳ್ಳ ಕಾವಲಿನ ಜಮೀನು ರೈತರಿಗೆ ಮೈಸೂರು ಸಂಸ್ಥಾನ ಆಡಳಿತದ ಕಾಲದಲ್ಲಿಯೇ ಬಂದಿದೆ. ಜಮೀನಿಗೆ ಸಂಬಂಧಿಸಿದಂತೆ ರೈತರ ಬಳಿ ದಾಖಲೆಗಳಿವೆ. ಆದರೂ ಸೂಕ್ತ ಪ್ರಮಾಣದಲ್ಲಿ ಪರಿಹಾರ ದೊರಕುತ್ತಿಲ್ಲ. ಎಕರೆಗೆ 2.5 ಲಕ್ಷ ರೂ. ಪರಿಹಾರ ಕೊಡುತ್ತೇವೆ ಎನ್ನುತ್ತಾರೆ. ಫಲವತ್ತಾದ ಜಮೀನಿನಲ್ಲಿ ವರ್ಷಕ್ಕೆ 2 ರಿಂದ 10 ಲಕ್ಷ ರೂ. ವರೆಗೂ ಸಂಪಾದನೆ ಮಾಡಬಹುದು. ಜಮೀನು ಕಳೆದುಕೊಂಡಿದ್ದಲ್ಲದೆ, ನಿರ್ದಿಷ್ಟ ಪರಿಹಾರ ಇಲ್ಲದೆ ಹೇಗೆ ಬದುಕುವುದು. ತಾತ, ಮುತ್ತಾನ ಕಾಲದಿಂದಲೂ ಕೃಷಿ ನಂಬಿ



ಬದುಕಿದ್ದೇವೆ. ಬೇರೆ ಕಸಬು ಗೊತ್ತಿಲ್ಲದ ನಾವು ಜೀವನ ಮಾಡುವುದಾದರೂ ಹೇಗೆ ಎಂದು ಮುಖಂಡ ಸಿದ್ದೇಶ್.ಜಿ. ಎಚ್. ಪ್ರಶ್ನಿಸಿದರು. ಭೂಮಿ ನಂಬಿದ ರೈತರಿಗೆ ನೆಮ್ಮದಿ ಇಲ್ಲದಂತಾಗಿದೆ. ಅನ್ನದಾತರ ಕಷ್ಟ ಕೇಳುವವರೆ ಇಲ್ಲದೆ, ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ. ಸರ್ಕಾರ ಗಂಗೂರು ರೈತರ ನೆರವಿಗೆ ನಿಲ್ಲಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಜಮೀನು ಬಳಿ ಅನಾಧಿಕಾಲದಲ್ಲಿ ನಿರ್ಮಿಸಿದ ಕೃಷಿ ಬಳಕೆಯ ಕೆರೆ ಇದೆ. ಸೂಕ್ತ ಪರಿಹಾರದಿಂದ ವಂಚಿತವಾದ ಜಮೀನುಗಳು ಕೃಷಿ ಪ್ರದೇಶ ಎಂಬುದಕ್ಕೆ ಹೇಳಿ ಮಾಡಿಸಿದಂತಿದೆ. ಇಷ್ಟಾದರೂ ನಮ್ಮ ಭೂಮಿಯನ್ನು ಕಸಿದುಕೊಳ್ಳುವ ಪ್ರಯತ್ನ ನಡೆಯುತ್ತಿದೆ ಎಂದು ತಿಳಿಸಿದರು.

ರೈತರಾದ ರಮೇಶ್ ಜಿ.ಎಸ್, ಶಿವಸ್ವಾಮಿ, ಶಿವೇಗೌಡ, ಜಯಲ್ಷ್ಮಮ್ಮ, ಸಾವಿತ್ರಿ, ಕಾವ್ಯಾ, ಚಂದ್ರಮ್ಮ ಇದ್ದರು.

# 10 ಕೆ.ಜಿ. ಗಾತ್ರದ ಗಡ್ಡೆ ಹೊರ ತೆಗೆದ ವೈದ್ಯರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದ ಸರ್ಕಾರಿ ಕ್ರಾಫರ್ಡ್ ಆಸ್ಪತ್ರೆಯಲ್ಲಿ ವೈದ್ಯರ ತಂಡವು ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ಮಹಿಳೆಯೊಬ್ಬರ ಹೊಟ್ಟೆಯಲ್ಲಿದ್ದ ಸುಮಾರು 10 ಕೆ.ಜಿ. ತೂಕದ ಗಡ್ಡೆಯನ್ನು ಸುರಕ್ಷಿತವಾಗಿ ಹೊರತೆಗೆದಿದೆ.

ಪಟ್ಟಣದ ಕುಶಾಲನಗರ ಬಡಾವಣೆಯ ಹಬಿಬುನ್ನಿಸ (40) ಅವರು ಕಳೆದ ಹಲವು ದಿನಗಳಿಂದ ತೀವ್ರ ಹೊಟ್ಟೆನೋವಿನಿಂದ ಬಳಲುತ್ತಿದ್ದು, ದೈನಂದಿನ ಚಟುವಟಿಕೆಗಳನ್ನು ನಡೆಸುವುದಕ್ಕೂ ತೊಂದರೆ ಅನುಭವಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಸರ್ಕಾರಿ ಕ್ರಾಫರ್ಡ್ ಆಸ್ಪತ್ರೆಗೆ ಭೇಟಿ ನೀಡಿದ್ದರು.

ಆಸ್ಪತ್ರೆಯಲ್ಲಿ ವೈದ್ಯಕೀಯ



ತಪಾಸಣೆ ನಡೆಸಿದ ವೇಳೆ ಮಹಿಳೆಯ ಹೊಟ್ಟೆಯಲ್ಲಿ ಅಸಹಜವಾಗಿ ದೊಡ್ಡ ಗಡ್ಡೆ ಇರುವುದನ್ನು ವೈದ್ಯರು ಪತ್ತೆಹಚಿದ್ದರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಿಕೊಂಡು, ಶಸ್ತ್ರಚಿಕಿತ್ಸೆ ನಡೆಸಲು ವೈದ್ಯರ ತಂಡ ನಿರ್ಧರಿಸಿತು.

ಹಿರಿಯ ಶಸ್ತ್ರ ಚಿಕಿತ್ಸಕ ಡಾ. ಪುರುಷೋತ್ತಮ್ ಅವರ ನೇತೃತ್ವದಲ್ಲಿ ನಡೆದ ಯಶಸ್ವಿ ಶಸ್ತ್ರಚಿಕಿತ್ಸೆಯಲ್ಲಿ ಸುಮಾರು 10 ಕೆ.ಜಿ. ತೂಕದ ಗಡ್ಡೆಯನ್ನು ಸುರಕ್ಷಿತವಾಗಿ ಹೊರತೆಗೆಯಲಾಯಿತು. ಚಿಕಿತ್ಸೆ ಯಶಸ್ವಿಯಾಗಿದ್ದು, ಮಹಿಳೆಯ ಆರೋಗ್ಯ ಸ್ಥಿತಿ ಸ್ಥಿರವಾಗಿದ್ದು, ಅವರು ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಸರ್ಕಾರಿ ಆಸ್ಪತ್ರೆಯಲ್ಲಿಯೇ ಇಂತಹ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿರುವುದು ವೈದ್ಯರ ಪರಿಣತಿ ಹಾಗೂ ಆಸ್ಪತ್ರೆಯ ಗುಣಮಟ್ಟದ ವೈದ್ಯಕೀಯ ಸೇವೆಗೆ ಮತ್ತೊಂದು ಹೆಗ್ಗಳಿಕೆಯಾಗಿದ್ದು, ಸಾರ್ವಜನಿಕರಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

# ಮೆದುಳು ಸಂಬಂಧಿತ ಖಾಯಿಲೆಗೆ ಹಿಮ್ಸ್‌ನಲ್ಲಿ ಚಿಕಿತ್ಸೆ ಲಭ್ಯ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮೆದುಳು ಸಂಬಂಧಿತ ಕಾಯಿಲೆಗಳಿಗೆ ಈಗ ಜಿಲ್ಲಾಸ್ಪತ್ರೆಗಳಲ್ಲಿ ಉತ್ತಮ ಚಿಕಿತ್ಸೆ ದೊರೆಯುತ್ತಿದ್ದು ಸಮಸ್ಯೆಯಾದಾಗ ಸಾರ್ವಜನಿಕರು ತಡಮಾಡದೆ ಆಸ್ಪತ್ರೆಗೆ ಭೇಟಿ ನೀಡಬೇಕು ಎಂದು ಜಿಲ್ಲಾ ನರರೋಗ ತಜ್ಞ ಡಾ. ಪ್ರಕಾಶ್ ಹೇಳಿದರು.

ತಾಲ್ಲೂಕಿನ ಶಾಂತಿಗ್ರಾಮ ಪ್ರದೀಪ್ ಇಂಟರ್ನ್ಯಾಷನಲ್ ಶಾಲೆಯಲ್ಲಿ ಮಕ್ಕಳು ಮತ್ತು ಪೋಷಕರಿಗಾಗಿ ನಡೆದ ಮೆದುಳಿನ ಆರೋಗ್ಯದ ಕುರಿತು ಜಾಗೃತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಮೆದುಳಿನ ಗಾಯಗಳು, ಸ್ಟ್ರೋಕ್, ರಕ್ತ ಹೆಪ್ಪುಗಟ್ಟುವಿಕೆ (ಬ್ಲಡ್ ಕ್ಲಾಟ್) ಮತ್ತು ಇತರ ನರವೈಜ್ಞಾನಿಕ ತೊಂದರೆಗಳ ಬಗ್ಗೆ ಜಾಗೃತಿ ವಹಿಸಬೇಕೆಂದರು.

ತಲೆಗೆ ಯಾವುದೇ ಗಾಯವಾದ 4 ಗಂಟೆಗಳೊಳಗೆ ಜಿಲ್ಲಾ ಆಸ್ಪತ್ರೆಗೆ ಬಂದರೆ ಸೂಕ್ತ ಚಿಕಿತ್ಸೆ ಮೂಲಕ ಸಮಸ್ಯೆಯನ್ನು ತಕ್ಷಣ ಪರಿಹರಿಸಬಹುದು. ಹಿಂದೆ ಬೆಂಗಳೂರಿನ ನಿಮಾನ್ಸ್, ಮೈಸೂರು, ಮಂಗಳೂರಿಗಳಿಗೆ ಹೋಗಬೇಕಿತ್ತು. ಈಗ ವ್ಯವಸ್ಥೆಯನ್ನು ಸುಧಾರಿಸಿ ಪ್ರತಿ ಜಿಲ್ಲಾ ಆಸ್ಪತ್ರೆಯಲ್ಲೂ ನರ ರೋಗ ತಜ್ಞರ ತಂಡ ತುರ್ತು ಸೇವೆ ಒದಗಿಸುತ್ತಿದೆ. ಇದು ರಾಜ್ಯ ಸರ್ಕಾರದ ಮಹತ್ವದ ಉಪಕ್ರಮವಾಗಿದೆ. ಬಿದ್ದು ಗಾಯವಾದಾಗ ಅಥವಾ ಆಘಾತವಾದಾಗ ಪ್ರಜ್ಞೆ ತಪ್ಪುವುದು, ಪಾರ್ಶ್ವವಾಯು ಅಥವಾ ಅರಿವು ಮರೆವಿನ ಸಂಭವ ಹೆಚ್ಚುತ್ತದೆ. ಈ ಬಗ್ಗೆ ವಿದ್ಯಾರ್ಥಿಗಳು ಅರಿವು ಹೊಂದಿರಬೇಕೆಂದು ತಿಳಿಸಿದರು.

ಕರ್ನಾಟಕ ಬ್ರೈನ್ ಹೆಲ್ತ್ ಜಿಲ್ಲಾ ಸಂಯೋಜಕಿ ಲತಾಮಣಿ ಮಾತನಾಡಿ, ಸ್ಟ್ರೋಕ್ ಅಥವಾ ತಲೆಗಾಯದ ಸಂದರ್ಭದಲ್ಲಿ ಟಿಗೋಲ್ಡನ್ ಅವರ್ಸ್ಟಿ (4 ರಿಂದ 5 ಗಂಟೆ) ಬಹಳ ಮುಖ್ಯ. ಆ ಸಮಯದಲ್ಲಿ ಬೆಂಗಳೂರಿಗೆ ಕರೆದೊಯ್ಯಲು ಸಾಧ್ಯವಾಗದೆ ಅಮೂಲ್ಯ ಸಮಯ ವ್ಯರ್ಥವಾಗುತ್ತಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಸರ್ಕಾರ ಮತ್ತು ನಿಮಾನ್ಸ್ ಸಹಯೋಗದಲ್ಲಿ ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಟಿಬ್ರೈನ್ ಹೆಲ್ತ್ ಕ್ಲಿನಿಕ್ಟಿ ಆರಂಭಿಸಿದೆ. ಸಾರ್ವಜನಿಕರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ಈ ಅರಿವನ್ನು ಜನರಿಗೆ ತಲುಪಿಸಲು ಶಾಲೆ, ಕಾಲೇಜುಗಳಲ್ಲಿ ಪೋಷಕರು ಮತ್ತು ಶಿಕ್ಷಕರೊಂದಿಗೆ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ಈ ಬಗ್ಗೆ ಮಾಹಿತಿ ನೀಡಲಾಗುತ್ತಿದೆ ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

# ಆ.10 ಮತ್ತು 11 ರಂದು ಹೈನುಗಾರಿಕೆ ಸಾಕಾಣಿಕೆ ತರಬೇತಿ

ಹಾಸನ : ಹಾಸನ ಜಿಲ್ಲೆಯ ರೈತರಿಗೆ, ರೈತ ಮಹಿಳೆಯರಿಗೆ ಹಾಗೂ ಆಸಕ್ತಿಯುಳ್ಳ ಎಲ್ಲರಿಗೂ ಪಶು ಪಾಲನಾ ಇಲಾಖೆಯ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರವತಿಯಿಂದ ರೈತರಿಗೆ ಆಧುನಿಕ ಹೈನುಗಾರಿಕೆ ಸಾಕಣಿಕೆ ತರಬೇತಿಯನ್ನು ಆ.10 ಮತ್ತು 11 ರಂದು ಏರ್ಪಡಿಸಲಾಗಿದೆ ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದ ಉಪ ನಿರ್ದೇಶಕರು ತಿಳಿಸಿದ್ದಾರೆ.

ತರಬೇತಿಯಲ್ಲಿ ಭಾಗವಹಿಸುವ ಶಿಭಿರಾರ್ಥಿಗಳಿಗೆ ಯಾವುದೇ ಪ್ರಯಾಣ ಭತ್ಯೆ ಅಥವಾ ಸ್ಟೈಪಂಡ್ ನೀಡಲಾಗುವುದಿಲ್ಲ, ಆಸಕ್ತಿಯುಳ್ಳವರು ಆಧಾರ್ ಕಾರ್ಡ್, ಪರಿಶಿಷ್ಟ ಜಾತಿ / ಪಂಗಡಕ್ಕೆ ಸೇರಿದವರು ಜಾತಿ ಪ್ರಮಾಣ ಪತ್ರ ಜೆರಾಕ್ಸ್ ಪ್ರತಿ ಹಾಗೂ ಎರಡು ಭಾವಚಿತ್ರದೊಂದಿಗೆ ತರಬೇತಿ ಪ್ರಾರಂಭವಾಗುವ ದಿನಾಂಕದಂದು ಬೆಳಿಗ್ಗೆ 10.30 ಗಂಟೆಯೊಳಗೆ ಉಪ ನಿರ್ದೇಶಕರ ಕಚೇರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ, ಬಿ.ಎಂ ರಸ್ತೆ ಸಂತೇಪೇಟೆ, ಹಾಸನದಲ್ಲಿ ಹಾಜರಾಗಬೇಕೆಂದು ಸೂಚಿಸಲಾಗಿದೆ, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08172-235226 ಗೆ ಸಂಪರ್ಕಿಸಬಹುದಾಗಿ ಎಂದು ತಿಳಿಸಿದ್ದಾರೆ.

# ಲಲಿತಾ-8

**– ಧನಂಜಯ ಜೀವಾಳ ಬಿ.ಕೆ.**

## ಗ್ರಾಮಾಯಣ-40

ಬೆಳಿಗ್ಗೆ ಎಂದಿನಂತೆ ಸಿದ್ಧರಾಗಿ ಶಾಲೆಗೆ ಹೊರಟ ಮೇಷ್ಟ್ರು, ಹೋಗುವ ದಾರಿಯಲ್ಲಿಯೇ ಲಲಿತಾಳ ಮನೆಗೆ ಭೇಟಿ ನೀಡಿ, ಆರೋಗ್ಯ ವಿಚಾರಿಸಿ, ಈ ಕೂಡಲೇ ಕಾಲೇಜಿಗೆ ಸೇರುವಂತೆ ಸಲಹೆ ನೀಡಿದರು. ಆಕೆಯ ಮನೆಯವರಿಂದ ಸಮ್ಮತಿ ಸಿಕ್ಕುತ್ತಿದ್ದಂತೆ, ತಮ್ಮ ಮನೆಯವರೊಂದಿಗೂ ಮಾತನಾಡಿ, ಯಾವುದಾದರೂ ಒಂದು ತೀರ್ಮಾನಕ್ಕೆ ಬರುವ ಭರವಸೆಯ ಜೊತೆಗೆ, ಆಕೆಯ ಕೈಯ್ಯನ್ನೆಂದೂ ಬಿಡುವುದಿಲ್ಲವೆಂದೂ ಅಭಯ ನೀಡಿದರು. ಒಲ್ಲದ ಮನಸ್ಸಿನಿಂದ ಕಾಲೇಜಿಗೆ ಸೇರಲು ಒಪ್ಪಿದ ಲಲಿತ ತನ್ನನ್ನು ಬಿಟ್ಟುಹೋದರೆ ಆತ್ಮಹತ್ಯೆ ಮಾಡಿಕೊಳ್ಳುವೆನೆಂದು ಬೆದರಿಕೆಯನ್ನೂ ಹಾಕಿದಳು. ತಾನೇ ಇಷ್ಟಪಟ್ಟ ಹುಡುಗಿಯನ್ನು ಅದರಲ್ಲೂ ಅವಳಾಗೇ ಒಲಿದುಬಂದ ಸುಂದರಿಯನ್ನು ಹಾಗೂ ಮೆಚ್ಚಿದ ಮನದನ್ನೆಯನ್ನು ಕಳೆದುಕೊಳ್ಳುವಂಥಾ ದಡ್ಡನಲ್ಲದಿದ್ದರೂ, ಈ ಹುಡುಗಿ ಈ ಸ್ನೇಹವನ್ನು ಇಷ್ಟು ಬೇಗ ಮತ್ತು ಈ ಚಿಕ್ಕ ವಯಸ್ಸಿನಲ್ಲಿ ಮದುವೆಯೇ ಆಗಿಬಿಡುವಷ್ಟು ಗಂಭೀರವಾಗಿ ಹಾಗೂ ಊರಿಗೆಲ್ಲ ತಿಳಿಯುವಂತೆ ರಂಪ ರಾಮಾಯಣ ಮಾಡಿದ ಬಗ್ಗೆ ಕೊಂಚ ಅಸಮಾಧಾನವನ್ನೂ ಹೊಂದಿದ್ದರು. ಅನುರಾಗ ಹುಟ್ಟುವುದು ಬಹಳ ಸುಲಭ ಆದರೆ ಅದನ್ನು ನಿಭಾಯಿಸುವುದು ಮತ್ತು ಒಂದು ಸ್ಪಷ್ಟತೆಯೊಂದಿಗೆ ತಾರ್ಕಿಕ ಹಂತಕ್ಕೆ ಕೊಂಡೋಯ್ಯುವುದು ಎಷ್ಟು ಸವಾಲಿನದ್ದು ಎಂದು ಮೇಷ್ಟ್ರಿಗೆ ಅರಿವಾಗತೊಡಗಿತು. ತಮ್ಮ ಮನೆಯಲ್ಲಿ ಒಂದಷ್ಟು ಪ್ರತಿರೋಧ ಬಂದರೂ ಅದನ್ನು ನಿಭಾಯಿಸಲು ಮಾನಸಿಕವಾಗಿ ಸಿದ್ಧರಾಗಿದ್ದ ಮೇಷ್ಟ್ರು, ತಮ್ಮ ಹಾಗೂ ಲಲಿತಳ ನಡುವಿನ ಗೆಳೆತನ ಹಾಗೂ ತಾವು ಒಬ್ಬರನ್ನೊಬ್ಬರು ಒಪ್ಪಿ ಮದುವೆಯಾಗಲು ಸಿದ್ಧವಿರುವುದನ್ನು ಸಂದರ್ಭಗಳು ಸಿಕ್ಕಾಗ ತಮ್ಮ ಮನೆಯಲ್ಲಿ ತಂದೆ-ತಾಯಿಗಳ ಎದುರಲ್ಲಿಯೇ ಪ್ರಸ್ತಾಪಿಸಿದ್ದರು. ಪರವೂರಿನಲ್ಲಿ ಉದ್ಯೋಗದಲ್ಲಿರುವ ಮಗ, ಈ ಸಂಬಂಧ ಬೇಡವೆಂದರೆ ಕೇಳುತ್ತಾನೆಯೇ, ಇನ್ನೂ ಕನಿಷ್ಠ ಮೂರು ವರ್ಷವಿಲ್ಲದೇ ಮದುವೆಯಾಗುವ ಸಾಧ್ಯತೆಯಿಲ್ಲ, ಆ ನಡುವೆ ಏನು ಬೇಕಾದರೂ ಆಗಬಹುದು, ಈಗಿರುವ ಅನುರಾಗ ಹಾಗೂ ಹೊಂದಾಣಿಕೆಯು ಆಗಲೂ ಅದೇ ತೀವ್ರತೆಯನ್ನು ಉಳಿಸಿಕೊಂಡಿರುತ್ತದೆಯೇ, ಚಂಚಲ ಮನಸ್ಸಿನ ಹುಡುಗ ಹುಡುಗಿಯರು ಇಂದಿರುವಂತೆ ನಾಳೆ ಇರೋದಿಲ್ಲ, ಕಾಲೇಜಿಗೆ ಹೋಗುತ್ತಿರುವ ಹುಡುಗಿ, ಹತ್ತಾರು ಜನ ಗೆಳೆಯ-ಗೆಳತಿಯರು, ನೂರಾರು ಪ್ರಲೋಭನೆಗಳು, ಮಗನೂ ಇನ್ನೂ ಸಣ್ಣ ವಯಸ್ಸು, ಊರೂರು ಸುತ್ತುತ್ತಿರುತ್ತಾನೆ, ಹಲವಾರು ಸ್ನೇಹಿತರು, ಶರವೇಗದ ಬದುಕಿನಲಿ ಕ್ಷಣಮಾತ್ರದ ತೀರ್ಮಾನಗಳು, ಬೇಡ ಎಂದ್ಹೇಳಿ ನಾವ್ಯಾಕೆ ಕೆಟ್ಟವರಾಗಬೇಕು? ಅವರಿಬ್ಬರ ನಡುವೆ ಇದೇ ಪ್ರೀತಿ, ವಿಶ್ವಾಸ, ಭರವಸೆ, ಅನುರಾಗ ಆಗಲೂ ಉಳಿದಿದ್ದರೆ, ಆಕೆಯ ಮನೆಯವರೂ ಸಂತೋಷದಿಂದ ಸಂಬಂಧ ಮಾಡಲು ಮುಂದೆ ಬಂದರೆ ಆಗಲಿ ಏನಂತೆ ಎಂಬ ತೀರ್ಮಾನಕ್ಕೆ ಬಂದಿದ್ದರು.

ಹದಿನೈದು ದಿನಗಳ ನಂತರ ಒಂದು ಸಂಜೆ ಲಲಿತಳ ತಾಯಿ ಮೇಷ್ಟನ್ನು ರಾತ್ರಿಯ ಊಟಕ್ಕೆ ಮನೆಗೆ ಬರಬೇಕೆಂದು ಫೋನ್ ಮಾಡಿ ಆಹ್ವಾನಿಸಿದರು. ಅಷ್ಟೊತ್ತಿಗಾಗಲೇ ಲಲಿತಾ ತನ್ನ ಹಠದ ಅನಾರೋಗ್ಯದಿಂದ ಚೇತರಿಸಿಕೊಂಡಿದ್ದಳು. ನಿಮ್ಮ ಒತ್ತಾಯಕ್ಕೆ ಕಾಲೇಜಿಗೆ ಸೇರುತ್ತಿರುವುದಾಗಿಯೂ ಹಾಗೂ ಕನಿಷ್ಠ ವಾರಕ್ಕೊಮ್ಮೆಯಾದರೂ ತನ್ನನ್ನು ನೋಡಲು ಬಂದು ಹೋಗಬೇಕೆಂದು ಶರತ್ತು ಹಾಕಿದ್ದಳು. ರಾತ್ರಿ ಎಂಟೂವರೆಯ ಅವರುಗಳ ಕಿಟಕಿ ಭೇಟಿ ಎಂದಿನಂತೆ ನಿರಾತಂಕವಾಗಿ ಸಾಗುತಿತ್ತು. ರಾತ್ರಿ ಏಳೂವರೆಗೆ ಲಲಿತಳ ಮನೆಗೆ ಹೋದ ಮೇಷ್ಟನ್ನ ಎದುರ್ಗೊಂಡ ಅಂದಾನಿಯವರು, ಲೋಕಾರೂಢಿ ಮಾತನಾಡುತ್ತ ನಮ್ಹುಡುಗಿಯಿಂದ ನಿಮಗೆ ಬಹಳ ತೊಂದರೆಯಾಯ್ತೆಂದು ಕೇಳ್ತಟ್ಟೆ. ನಿಮ್ಮನ್ನ ಬಹಳ ಹಚ್ಕೊಂಡ್ಬಿಟ್ಟದಾಳೆ. ಆದರೆ ಏನು ಮಾಡೋದು ಈಗ ತಾನೇ ಪೀಯೂಸಿ ಮುಗಿಸಿಕೊಂಡಿದಾಳೆ. ಮದುವೆ ಮಾಡೋ ವಯಸ್ಸೂ ಅಲ್ಲ. ಹೋದ ವಾರ ಮೈಸೂರಿನಲ್ಲಿ ಡಿಗ್ರಿಗೆ ಸೇರಿಸಿದ್ದೀವಿ. ನೀವೇನೋ ಅವತ್ತು ನನ್ಹತ್ರ ನೇರವಾಗಿಯೇ ಕೇಳಿದ್ರಿ, ಇಷ್ಟ ಇದೆ, ಮದುವೆಯಾಗ್ತೀನಿ ಅಂತ. ನನಗೂ ಖುಷಿಯಾಯ್ತು. ನಿಮ್ಮ ಮನೆಯಲ್ಲಿ ಏನಭಿಪ್ರಾಯ ಹೇಳಿದ್ರು? ಎಂದರು.

ನಿಮ್ಮ ಮನೆ, ನಿಮ್ಮ ಕುಟುಂಬ, ನಿಮ್ಮಗಳ ಬಗ್ಗೆ ಏನೂ ತಿಳಿಯದೇ, ಕೇವಲ ನಾನು ಕೊಟ್ಟಿರುವ ಮಾಹಿತಿಯಿಂದ ನಮ್ಮನೆಯವರಿಗೆ ಯಾವುದೇ ತೀರ್ಮಾನ ಕೈಗೊಳ್ಳಲಾಗದು. ಹಾಗೆಯೇ, ನಿಮಗೂ ಸಹಾ ನನ್ನ ಕುರಿತು ಯಾವ ರೀತಿಯ ನಿರ್ಧಾರವನ್ನೂ ತಳೆಯಲಾಗದು. ನಮ್ಮಿಬ್ಬರಿಗೆ ಒಬ್ಬರಿಗೊಬ್ಬರ ಮೇಲೆ ಇಷ್ಟ ಇದೆ ಅನ್ನುವುದಷ್ಟೇ ಈ ಕ್ಷಣದ ಸತ್ಯ. ಇದುವರೆಗೂ ಆಗಿರುವುದು ಕೇವಲ ಗ್ರೀಟಿಂಗ್ ಕಾರ್ಡ್, ಬುಕ್ಸ್, ಆಡಿಯೋ ಕ್ಯಾಸೆಟ್, ಗಿಫ್ಟ್‌ಗಳ ವಿನಿಮಯ. ನನಗೇನೋ ನಿಮ್ಮ ಮಗಳನ್ನ ನಿಮ್ಮ ಹಾಗೂ ನಮ್ಮ ಮನೆಯವರ ಒಪ್ಪಿಗೆ ಪಡೆದು




ಮದುವೆಯಾಗಬೇಕೆಂದಿದೆ. ಆಕೆಗೂ ಅದೇ ಮನಸ್ಸಿದೆ, ಅದರೆ ನೀವು ಹೇಳುವಂತೆ ಲಲಿತಳದ್ದು ಡಿಗ್ರಿಯಾದರೂ ಮುಗಿಯಲಿ. ಗಂಡ-ಹೆಂಡತಿಯಾಗಿ ಬದುಕನ್ನೆದುರಿಸುವ ಮನೋಭೂಮಿಕೆ ಸಿದ್ಧವಾದಾಗಲೂ ಇದೇ ಮನಸ್ಥಿತಿ ಉಳಿದಿರುತ್ತದೆಯೋ ಹೇಳಲಾಗದು. ನಿಮ್ಮ ಮಗಳನ್ನು ಅವಳ ವಯೋಸಹಜ ಭಾವನೆಗಳನ್ನು ಬಳಸಿಕೊಂಡು ಮರುಳುಮಾಡಿ ತಲೆಕೆಡಿಸಿದ್ದಾನೆಂದು ತಪ್ಪು ತಿಳಿಯಬೇಡಿ. ನಾನೊಂದು ಡಿಸಿಪ್ಲೀನ್ ಇಟ್ಟುಕೊಂಡು ಬದುಕಿರುವ ಮನುಷ್ಯ. ಗೌರವದಿಂದ ಬದುಕಿರುವ ಕುಟುಂಬದವ. ದಿನ ಬೆಳಗಾದರೆ ನೂರಾರು ಮಕ್ಕಳಿಗೆ ಪಾಠ ಹೇಳಿಕೊಡುವ ವೃತ್ತಿಯವ. ಎಲ್ಲಕ್ಕೂ ಹೆಚ್ಚಾಗಿ ನಿಮ್ಮೂರಿನ ನೂರಾರು ಜನರ ವಿಶ್ವಾಸ ಉಳಿಸಿಕೊಂಡಿರುವವ. ನಮ್ಮ ಮನೆಯಲ್ಲೂ ಈ ಎಲ್ಲಾ ವಿಚಾರವನ್ನೂ ಹೇಳಿದ್ದೇನೆ. ಮುಂದಿನದು ನಿಮಗೆ ಬಿಟ್ಟಿದ್ದು.

ಅಷ್ಟರಲ್ಲಿ ಅಪ್ಪಾ, ಇಬ್ಬರೂ ಊಟಕ್ಕೆ ಬರಬೇಕಂತೆ ಎಂದ ಲಲಿತಳ ದನಿ ಒಳಮನೆಯಿಂದ ಕೇಳಿತು. ಮೇಷ್ಟ್ರಿಗೆ ತನ್ನ ಕೈಯ್ಯಾರೆ ಬಿಸಿನೀರು ತುಂಬಿದ್ದ ಕಂಚಿನ ಬಿಂದಿಗೆಯನು ನೀಡಿದ ಲಲಿತ, ಕೈಕಾಲು ತೊಳೆದುಕೊಂಡ ನಂತರ ಶುಭ್ರ ಶ್ವೇತ ಟವಲೊಂದನ್ನು ನೀಡಿ, ಪುನಃ ಹಿಂಪಡೆದು, ತನ್ನ ಹೆಗಲ ಮೇಲೆ ಹಾಕಿಕೊಂಡು ತನ್ನ ಎರಡೂ ಕೈಗಳನ್ನು ಹೆಣೆದುಕೊಂಡು ಆ ಟವಲನ್ನು ಬಿಗ್ಗಿಯಾಗಿ ಅಪ್ಪಿಕೊಂಡಳು. ತಾಯಿ ಮಗಳಿಬ್ಬರೂ ಅತಿಥಿಗಾಗಿಯೇ ಸಿದ್ದಪಡಿಸಿದ್ದ ವಿವಿಧ ಭಕ್ಷ್ಯಗಳನ್ನು ಅತ್ಯಂತ ಸಡಗರದಿಂದ ಬಡಿಸಿದರು. ನಂತರ ಅವರುಗಳೂ ಸಹಾ ಅದೇ ಟೇಬಲ್ಲಿನ ಮೇಲೆ ತಟ್ಟೆಗೆ ಬಡಿಸಿಕೊಂಡು, ಸಂತೃಪ್ತಿಯಿಂದ ಊಟ ಮುಗಿಸಿದರು. ನಾಳೆ ಬೆಳಗಿನ ಮೊದಲ ಬಸ್ಸಿಗೇ ಮೈಸೂರಿನ ಕಾಲೇಜು ಹಾಸ್ಟೆಲಿಗೆ ಬಿಟ್ಟು ಬರಲಿಕ್ಕಿದೆ. ನಾಳೆಯಿಂದಲೇ ಕಾಲೇಜು ಪ್ರಾರಂಭ. ಬಿಡುವಿದ್ದರೆ ನೀವೂ ಬನ್ನಿ ಎಂದರು ಅಂದಾನಿಯವರು.

ಬರಲಾಗುವುದಿಲ್ಲ, ಮಕ್ಕಳಿಗೆ ಟೆಸ್ಟ್ ನಡೀತಿದೆ. ಬೆಳಿಗ್ಗೆ ಬಸ್ ನಿಲ್ದಾಣದವರೆಗೂ ಬರ್ತೀನಿ ಎಂದ ಮೇಷ್ಟ್ರು ಮೂವರಿಗೂ ಶುಭರಾತ್ರಿ ಹೇಳಿ ಮನೆಕಡೆಗೆ ಹೊರಟರು. ಬೆಳಗಿನ ಮೊದಲ ಬಸ್ಸು ಐದೂವರೆಗೆ ಹೊರಡಲಿದ್ದುದರಿಂದ ಐದು ಗಂಟೆಗೇ ತನ್ನೆಲ್ಲ ಲಗೇಜುಗಳೊಂದಿಗೆ ಮನೆ ಬಿಟ್ಟ ಮೂರೂ ಜನರನ್ನು ಬಸ್ ನಿಲ್ದಾಣದಲ್ಲಿ ಭೇಟಿ ಮಾಡಿದ ಮೇಷ್ಟ್ರು ಶುಭ ಹಾರೈಸಿ ಬೀಳ್ಕೊಟ್ಟರು. ತಿರುವಿನಲ್ಲಿ ಮರೆಯಾಗುವವರೆಗೂ ಮೇಷ್ಟ್ರತ್ತಲೇ ನೋಡುತ್ತಿದ್ದ ಲಲಿತಾ ಬೆಳಗಿನ ಆ ಕುಳಿರ್ಗಾಳಿಗೆ ಬೆದರಿ ಬಸ್ಸಿನ ಕಿಟಕಿಯ ಗಾಜನ್ನು ಎಳೆದು ಕೂರಿಸಿ ಬಿಗಿಮಾಡಿದಳು. ಇತ್ತ ಬಸ್ಟ್ಯಾಂಡಿನಲಿ ಹೂ ಮಾರುವ ಮಂಜುಳ ಮೇಷ್ಟ್ರೇ, ನೀವು ಕಳಿಸಿದ್ದು ಅಂತ ಹೇಳಿ, ನಿನ್ನೆ ರಾತ್ರಿನೇ ಲಲಿತಂಗೆ ಒಂದು ಮಾರು ಮಲ್ಲಿಗೆ ಮೊಗ್ಗಿನ ಮಾಲೆ ಕೊಟ್ಟಿದ್ದೆ. ನೀವು ಗಂಡಸರಿಗೆ ಇದೆಲ್ಲ ತಿಳಿಯಲ್ಲ, ಬಿಡಿ ಎಂದಳು. ಅಚ್ಚರಿಯಿಂದ ಮಂಜುಳನೆಡೆಗೆ ನೋಡಿದ ಮೇಷ್ಟ್ರು, ತನ್ನ ಪ್ಯಾಂಟಿನ ಜೇಬಿನಲ್ಲಿದ್ದ ಇಪ್ಪತ್ತು ರೂಪಾಯಿ ನೋಟೊಂದನ್ನ ಮಂಜುಳನಿಗೆ ಕೊಡಲುಹೋದರು. ಛೇ ಛೇ, ನಾನು ಎತ್ತಿ ಆಡಿಸಿದ ಹುಡುಗಿ ಅವಳು. ನಿಮ್ಮ ಫ್ರೆಂಡ್ಶಿಪ್ಪಿನ ಬಗ್ಗೆ ನನಗೂ ಹೇಳಿದ್ದಾಳೆ. ಆದಷ್ಟು ಬೇಗ ಮದುವೆ ಮಾಡ್ಕಂಡು, ಇಬ್ಬರೂ ಚೆನ್ನಾಗಿರಿ ಎಂದು, ಎಷ್ಟು ಒತ್ತಾಯಿಸಿದರೂ ಹಣವನ್ನು ತೆಗೆದುಕೊಳಲೇ ಇಲ್ಲ.

ಈ ಮಂಜುಳಾ ತನ್ನದೇ ತೋಟದಲ್ಲಿ ಹೂ ಬೆಳೆದು, ಅದನ್ನು ಮಾಲೆಯನ್ನಾಗಿ ಕಟ್ಟಿ ಬಸ್ ನಿಲ್ದಾಣದಲ್ಲಿ ನಿಲ್ಲುವ ಬಸ್ಸಿನಲ್ಲಿನ ಪ್ರಯಾಣಿಕರಿಗೆ ಮಾರುತಿದ್ದಳು. ಮದುವೆಯಾದ ಆರೇ ತಿಂಗಳಲ್ಲಿ ಗಂಡನೊಡನೆಯ ದೈನಂದಿನ ಜಗಳವೊಂದರ ಮಾತಿನ ಭರದಲ್ಲಿ, ನೀನೂ ಒಬ್ಬ ಗಂಡ್ಸಾ? ಎಂದಳಂತೆ, ಮಾರನೇ ದಿನದಿಂದ ಊರಿನಿಂದಲೇ ಕಾಣೆಯಾದ ಆತ ಮತ್ತೆಂದೂ ಯಾರ ಕಣ್ಣಿಗೂ ಕಾಣಿಸಿಕೊಳ್ಳಲಿಲ್ಲ. ಲಲಿತಾಳನು ಬಸ್ ಸ್ಟ್ಯಾಂಡಿನಲಿ ಬೀಳ್ಕೊಟ್ಟ ಮೇಷ್ಟ್ರು ನಡೆಯಲು ಸಹಕರಿಸದ ಕಾಲುಗಳೊಂದಿಗೆ ಇಡೀ ಎದೆಯೇ ಖಾಲಿಯಾಗಿರುವ ಸಂಕಟದ ಛಾಯೆಯೊಂದಿಗೆ ವಿಷಣ್ಣತೆಯಿಂದ ಮನೆ ಸೇರಿ ಮತ್ತೆ ಹಾಸಿಗೆ ಮೇಲುರುಳಿಕೊಂಡು ತಲೆಯೂ ಮುಚ್ಚಿಕೊಳ್ಳುವಂತೆ ರಗ್ಗೆಳೆದುಕೊಂಡರು.

(ಮುಂದುವರಿಯುವುದು)

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-06

1825: ಬೊಲಿವಿಯಾ ದೇಶವು ಸ್ಪೇನ್‌ನಿಂದ ಸ್ವಾತಂತ್ರ್ಯ ಘೋಷಿಸಿತು.

1926: ಅಮೆರಿಕದ ಈಜುಗಾರ್ತಿ ಗೆಟ್ರ್ರೂಡ್ ಈಡರ್ಲೆ ಇಂಗ್ಲಿಷ್ ಕಾಲುವೆಯನ್ನು ಈಜಿ ದಾಟಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

1945: ಜಪಾನ್‌ನ ಹಿರೋಷಿಮಾ ನಗರದ ಮೇಲೆ ಅಮೆರಿಕ ಮೊದಲ ಪರಮಾಣು ಬಾಂಬ್ ದಾಳಿ ನಡೆಸಿತು. ಸಾವಿರಾರು ಜನರು ಮೃತಪಟ್ಟ ಈ ಘಟನೆ ವಿಶ್ವ ಇತಿಹಾಸದ ಅತ್ಯಂತ ದುರಂತಗಳಲ್ಲಿ ಒಂದಾಗಿದೆ.

1962: ಜಮೈಕಾ ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದುಕೊಂಡಿತು.

**ಜನನ**

1881: ಸರ್ ಅಲೆಕ್ಸಾಂಡರ್ ಫ್ಲೆಮಿಂಗ್, ಪೆನಿಸಿಲಿನ್ ಕಂಡುಹಿಡಿದ ವಿಜ್ಞಾನಿ ಹಾಗೂ ನೊಬೆಲ್ ಪ್ರಶಸ್ತಿ ಪುರಸ್ಕೃತರು

1928: ಆಂಡಿ ವಾರ್ಹೋಲ್, ಅಮೆರಿಕದ ಪ್ರಸಿದ್ಧ ಚಿತ್ರಕಲಾವಿದ

**ನಿಧನ**

2018: ತಮಿಳುನಾಡಿನ ಹಿರಿಯ ರಾಜಕಾರಣಿ ಎಂ. ಕರುಣಾನಿಧಿ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248